**ಕರ್ನಾಟಕ ಸರ್ಕಾರ**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

ಅಸಲು ದಾವಾ ಸಂಖ್ಯೆ **ನಂ.48/2015**

ಪಿ .ಡಬ್ಲ್ಯೂ: 2

| | | |
|---|---|---|
| ಹೆಸರು | : | ಚೇತನ್ ನಾಯ್ಕ |
| ಗಂಡನ ಹೆಸರು | : | ದೇವ್ಲನಾಯ್ಕ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಪಿ ಡಿ ಒ |
| ವಾಸಸ್ಥಳ | : | ಬೇಲೆನಹಳ್ಳಿ ತಾಂಡ್ಯ |

ದಿನಾಂಕ: **08-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯ ಮೌಖಿಕ **ಮುಖ್ಯ ವಿಚಾರಣೆ :**

ಮಂಡಲಪಂಚಾಯಿತಿಯಿಂದ ಮೂರು ಗ್ರಾಮ ಪಂಚಾಯಿತಿಗಳು ಗೋಪಾಲ, ಕರಕುಚ್ಚಿ ಹಾಗೂ ಹಲಸೂರು ಗ್ರಾಮಗಳು ವಿಂಗಡನೆ ಆಗಿದ್ದು, ಅದರ ಪ್ರಕಾರ 1994-95 ನೇ ಸಾಲಿನಲ್ಲಿ ಬಂದಂತಹ ಗೋಪಾಲ ಗ್ರಾಮ ಪಂಚಾಯಿತಿಯ ಸದಸ್ಯರು ಮಾಡಿದಂತಹ ಅಳತೆ ಆಧಾರದ ಮೇಲೆ ಒಂದು ಅಸಸ್ ಮೆಂಟ್ ಬುಕ್ಕನ್ನು ತಯಾರು ಮಾಡಿರುತ್ತಾರೆ. ಅದರ ಪ್ರಕಾರವಾಗಿ ಆ ದಿನದಿಂದ ಇಲ್ಲಿಯವರೆಗೂ ಆಡಳಿತ ಮಾಡಿಕೊಂಡು ಬಂದಿರುತ್ತೇವೆ. ಯಾವುದೇ ತಕರಾರು ಬಂದಲ್ಲಿ ಅಸಸ್ ಮೆಂಟ್ ರಿಜಿಸ್ಟರ್ ಪುಸ್ತಕದ ಮೇರೆಗೆ ಅದನ್ನು ಪರಿಶೀಲನೆ ಮಾಡಿ ಪರಿಗಣಿಸಿ ತೀರ್ಮಾನಿಸುತ್ತೇವೆ. ಈ ಪ್ರಕರಣದಲ್ಲಿ ವಾದಿ ಪ್ರತಿವಾದಿಗಳ ನಡುವೆ ಸುಮಾರು 15 ವರ್ಷಗಳಿಂದ ಅಸಸ್ ಮೆಂಟ್ ಪುಸ್ತಕದ 323 ಖಾತಾ ಸಂಖ್ಯೆಯ ಮೇಲೆ ತಕರಾರು ನಡೆದುಕೊಂಡು ಬಂದಿರುತ್ತದೆ. ವಾದಿ ಪ್ರತಿವಾದಿಗಳು ಕೇಳಿದಾಗ ಅಸಸ್ ಮೆಂಟ್ ಪುಸ್ತಕದಲ್ಲಿ ನಮೂದಾಗಿರುವಂತಹ ನಿವೇಶನಗಳ ಮೇಲೆ ದಾಖಲಾತಿಗಳನ್ನು ಅವರಿಗೆ ನೀಡಿರುತ್ತೇವೆ. ಪ್ರತಿವಾದಿಗಳು ಅವರ ಹಿಡುವಳಿ ಜಮೀನಿನಲ್ಲಿ ವಾದಿ ಮಾದತ್ತಿಗೌಡರವರಿಗೆ ಅಸಸ್ ಮೆಂಟ್ ನ್ನು ಖಾತೆ ಮಾಡಿಕೊಟ್ಟಿರುತ್ತಿರಾ ಎಂದು ತಕರಾರು ಮಾಡಿರುತ್ತಾರೆ. ವಾದಿಯಾದ ಮಾದತ್ತಿಗೌಡರವರು ಅವರ ಅಸಸ್ ಮೆಂಟ್ ಖಾತೆಯು ಮೀನಾಕ್ಷಮ್ಮನವರ ಜಮೀನಿನಲ್ಲಿ

ಇರುವುದಿಲ್ಲ. ಅವರ ಅಸಸ್ ಮೆಂಟ್ ಪ್ರತ್ಯಕವಾಗಿ ಇರುತ್ತದೆ ಎಂದು ಹೇಳಿರುತ್ತಾರೆ. ದಿಃ 08-07-2015 ರಂದು ವಾದಿಯಾದ ಮಾದತ್ತಿಗೌಡರವರಿಗೆ ಅಸಸ್ ಮೆಂಟ್ ನಂ.323 ರ ಮೇಲೆ ಇ ಸ್ವತ್ತನ್ನು ನೀಡಿರುತ್ತೇನೆ. ಪ್ರತಿವಾದಿಯು ಸಲ್ಲಿಸಿದ ಅರ್ಜಿ ಮೇರೆಗೆ ಅಸಸ್ ಮೆಂಟ್ ನಂ.322 ರ ಪ್ರಕಾರ ಇ ಸ್ವತ್ತನ್ನು ಪ್ರತಿವಾದಿಗೆ ನೀಡಿರುತ್ತೇನೆ. ಅಸಸ್ ಮೆಂಟ್ ನಂ.322 ಪ್ರತಿವಾದಿಯ ತಂದೆಯಿಂದ ಪ್ರತಿವಾದಿಗೆ ಬಂದಿರುತ್ತದೆ. ಅಸಸ್ ಮೆಂಟ್ 323 ಹಾಗೂ 322 ಬೇರೆ ಬೇರೆ ಸ್ಥಳದಲ್ಲಿರುತ್ತದೆ. ಅಸಸ್ ಮೆಂಟ್ ಪುಸ್ತಕದ ಪ್ರಕಾರ ವಾದಿಯಾದ ಮಾದತ್ತಿಗೌಡರವರಿಗೆ ಅಸಸ್ ಮೆಂಟ್ ನೀಡುವಾಗ ಹುಲ್ಲಿನ ಮನೆ ಇದ್ದುದ್ದು ಕಂಡುಬಂದಿರುತ್ತದೆ. ಆದರೆ ದಿಃ 08-07-2015 ರಂದು ನೀಡಿದ ಇ ಸ್ವತ್ತು ನೀಡುವ ಮುಂಚೆ ಸ್ಥಳ ತನಿಖೆ ಮಾಡಿದಾಗ ಹುಲ್ಲಿನ ಮನೆ ಇರಲಿಲ್ಲ. ಆದ್ದರಿಂದ ಇ ಸ್ವತ್ತಿನಲ್ಲಿ ಖಾಲಿ ನಿವೇಶನ ಎಂದು ನಮೂದು ಮಾಡಿರುತ್ತೇವೆ. ವಾದಿ ಪ್ರತಿವಾದಿಗಳು ಸ್ವತ್ತುಗಳನ್ನು ಅಳತೆ ಮಾಡುವ ಸಮಯದಲ್ಲಿ ನಮಗೆ ಮಾಹಿತಿ ನೀಡಿರುವುದಿಲ್ಲ. ಹಾಗಾಗಿ ನಮಗೆ ಸದರಿ ಸ್ವತ್ತುಗಳು ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ಸ್ಪಷ್ಟವಾಗಿ ತಿಳಿದಿರುವುದಿಲ್ಲ.

**ಪಾಟೀ ಸವಾಲುಃ** ವಾದಿ ಪರ ಶ್ರೀ ಜಿ ಎಂ ವಕೀಲರಿಂದ

ನಿಪಿ-25 ರ ಪ್ರಕಾರ ದಿಃ 23-11-2005 ರಂದು ಅಸಸ್ ಮೆಂಟ್ 323 ರಲ್ಲಿ ವಾದಿಗೆ ಮನೆ ಕಟ್ಟಲು ಪರವಾನಗಿ ನೀಡಿರುತ್ತಿರಾ ಎಂದರೆ ಸರಿ. ನಿಪಿ-26 ರ ಪ್ರಕಾರ ನಿಮ್ಮ ಇಲಾಖೆಯವರು ನೀಡಿರುವ ಪರವಾನಗಿ ಚಕ್ಕುಬಂದಿಯ 40 ಇಂಟು 30 ಅಳತೆ ಪ್ರಕಾರ ಚಕ್ಕುಬಂದಿ ಪೂರ್ವಕ್ಕೆ ಹಿಡುವಳಿ, ಪಶ್ಚಿಮಕ್ಕೆ ಹಿಡುವಳಿ, ಉತ್ತರಕ್ಕೆ ಹಿಡುವಳಿ ಮತ್ತು ದಕ್ಷಿಣಕ್ಕೆ ರಸ್ತೆ ಎಂದು ನಮೂದು ಇದೆ ಎಂದರೆ ಸರಿ. ಅಸಸ್ ಮೆಂಟ್ ನಂ.323 ರ ಸಂಬಂಧ ಮಾದತ್ತಿಗೌಡರಿಂದ ಪಂಚಾಯಿತಿಯವರು ಕಂದಾಯ ಪಡೆದುಕೊಂಡಿರುತ್ತಾರೆಂದರೆ ಸರಿ. ನಮ್ಮ ಇಲಾಖೆಯವರು ಸ್ಥಳ ಪರಿಶೀಲನೆ ಮಾಡಿದ ನಂತರ ಪರವಾನಗಿ ನೀಡುತ್ತೇವೆ ಎಂದರೆ ಸರಿ. ಗೋಪಾಲ ಕಾಲೋನಿ ಗ್ರಾಮ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂಬ ಮಾಹಿತಿ ನನಗೆ ಇಲ್ಲ.

ವಾದಿಯ ಸ್ವತ್ತು ಸರ್ವೆ ನಂ.52 ರಲ್ಲಿ ಬರುತ್ತದೆ ಎಂದರೆ ಸಾಕ್ಷಿ ನನಗೆ ಸ್ಪಷ್ಟವಾದ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ನಿಪಿ-14 ರ ಪ್ರಕಾರ ಸರ್ವೆ ನಂ.52 ರಲ್ಲಿ ಸರ್ಕಾರಿ ಗೋಮಾಳ 168 ಇದೆ ಎಂದರೆ ಸರಿ.

**ಪಾಟೀ ಸವಾಲುಃ** ವಾದಿ ಪರ ಶ್ರೀ ಎಸ್ ವಿ ಎ ವಕೀಲರಿಂದ

ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

Sd/-

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**

**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಅಸಲು ದಾವಾ ನಂ.250/2020**

ಪಿ .ಡಬ್ಲ್ಯೂ:1

ಹೆಸರು : ಡಿ. ವೀರಾಚಾರ್

ತಂದೆ ಹೆಸರು : ವೀರಭದ್ರಾಚಾರ್

ವಯಸ್ಸು : 93 ವರ್ಷ

ಉದ್ಯೋಗ : ನಿವೃತ್ತ ಶಿಕ್ಷಕರು

ವಾಸಸ್ಥಳ : ಕುಂಟಿನಮಡು ಗ್ರಾಮ

**ದಿನಾಂಕ. 26-05-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ದಿವಾನಿ ಪ್ರಕ್ರಿಯ ಸಂಹಿತೆ ಕಲಂ **151** ರ ಅಡಿಯಲ್ಲಿ ಮೌಖಿಕ **ಮುಖ್ಯ ವಿಚಾರಣೆ : 1** ನೇ ಪ್ರತಿವಾದಿ ಪರ ವಕೀಲರಿಂದ

ನಾನು ಪ್ರಸ್ತುತ ದಾವಣಗೆರೆ ಪಟ್ಟಣದ ನನ್ನ ಮಗಳ ಮನೆಯಲ್ಲಿ ವಾಸವಾಗಿದ್ದೇನೆ. 1 ನೇ ವಾದಿ ನನ್ನ ಸೊಸೆ. 2 ಮತ್ತು 3 ನೇ ಪ್ರತಿವಾದಿಗಳು ನನ್ನ ಮೊಮ್ಮಕ್ಕಳು. 2 ನೇ ಪ್ರತಿವಾದಿ ನನ್ನ ಹಿರಿಯ ಮಗ. 3 ನೇ ಪ್ರತಿವಾದಿ ನನ್ನ ಮಗಳು. ವಾದಿಗಳು ಈ ದಾವೆಯನ್ನು ನನ್ನ ಮತ್ತು ಇತರರ ವಿರುದ್ಧ ದಾವ ಸ್ವತ್ತುಗಳಲ್ಲಿ ವಿಭಾಗ ಮಾಡಿಕೊಡಬೇಕೆಂದು ಹೂಡಿರುತ್ತಾರೆ. ದಾವ ಆಸ್ತಿಗಳ ಪೈಕಿ ಐಟಂ ನಂ. 2 ರ ಸ್ವತ್ತು ನನಗೆ ಸ್ವಯಾರ್ಜಿತವಾದ ಆಸ್ತಿ . ದಾವ ಐಟಂ ನಂ.8 ಸಹ ನನ್ನ ಸ್ವಯಾರ್ಜಿತ ಆಸ್ತಿ. ಈ ದಾವೆಯು ರಾಜಿಯಾಗಿರುತ್ತದೆ. ಆದರೆ, ನಾನು ರಾಜಿಗೆ ಒಪ್ಪಿರುವುದಿಲ್ಲ. ಈ ದಾವೆಯಲ್ಲಿ ಆಗಿರುವ ರಾಜಿಯು ನನ್ನ ಒಪ್ಪಿಗೆ ಇಲ್ಲದೇ ರಾಜಿ ಅರ್ಜಿಯನ್ನು ಈ ನ್ಯಾಯಾಲಯವು ಪುರಸ್ಕರಿಸಿರುತ್ತದೆ. ನನ್ನ ಸಹಿಯನ್ನು ರಾಜಿ ಅರ್ಜಿಗೆ ಒತ್ತಡದಿಂದ ವಾದಿಗಳು ಮತ್ತು 2 ನೇ ಪ್ರತಿವಾದಿ ಪಡೆದಿರುತ್ತಾರೆ. ರಾಜಿ ಅರ್ಜಿಯಲ್ಲಿ ಬರೆದಿರುವ ಸಂಗತಿಗಳನ್ನು ನನಗೆ ಓದಿ ತಿಳಿಸಿರುವುದಿಲ್ಲ. ರಾಜಿ ಅರ್ಜಿಯಲ್ಲಿರುವ ಸಂಗತಿಗಳನ್ನು ಬರೆಯಲು

ನಾನು ನಮ್ಮ ವಕೀಲರಿಗೆ ತಿಳಿಸಿರುವುದಿಲ್ಲ. ರಾಜಿ ಅರ್ಜಿಯನ್ನು ವಾದಿಗಳ ವಕೀಲರು ಮತ್ತು 2ನೇ ಪ್ರತಿವಾದಿಯ ವಕೀಲರು ತಯಾರು ಮಾಡಿರುತ್ತಾರೆ. ರಾಜಿ ಅರ್ಜಿಗೆ ನಾನು ಜೀವ ಭಯದಿಂದ ಸಹಿಯನ್ನು ಮಾಡಿರುತ್ತೇನೆ. ರಾಜಿ ಅರ್ಜಿಯ ಪ್ರಕಾರ ನನಗೆ ಯಾವುದೇ ಆಸ್ತಿ ಬಂದಿರುವುದಿಲ್ಲ. ಆದರೆ 3ನೇ ಪ್ರತಿವಾದಿಗೆ 3-00 ಗುಂಟೆ ಜಮೀನು ಬಂದಿರುತ್ತದೆ. ಈ ದಾವೆಯಲ್ಲಿ ರಾಜಿಯಾದ ನಂತರ ವಾದಿಗಳು ಮತ್ತು 2ನೇ ಪ್ರತಿವಾದಿ ನನ್ನನ್ನು ಚೆನ್ನಾಗಿ ನೋಡಿಕೊಂಡಿರುವುದಿಲ್ಲ. ಆನಂತರ ನನ್ನನ್ನು ಮನೆಯಿಂದ ಹೊರ ಹಾಕಿರುತ್ತಾರೆ. ಆನಂತರ ನಾನು 3ನೇ ಪ್ರತಿವಾದಿಯ ಮನೆಯಲ್ಲಿ ವಾಸವಾಗಿದ್ದೇನು.

ನ್ಯಾಯಾಲಯದಲ್ಲಿ ರಾಜಿ ಆಗಿರುವ ಆದೇಶವನ್ನು ರದ್ದುಪಡಿಸಿ ನನಗೂ ಮತ್ತು ನನ್ನ ಮಗಳಿಗೂ (3ನೇ ಪ್ರತಿವಾದಿ) ದಾವ ಆಸ್ತಿಗಳಲ್ಲಿ ಭಾಗ ಬರಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ವಾದಿ ಪರ **ವಕೀಲರಿಂದ.**

ವಾದಿಗಳ ಪರ ವಕೀಲರು ಹಾಜರಿದ್ದು, ಪಾಟೀ ಸವಾಲಿಗೆ ಸಮಯ ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**

**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಅಸಲು ದಾವಾ ನಂ.274/2017**

ಪಿ .ಡಬ್ಲ್ಯೂಃ 5

ಹೆಸರು : ಎಂ. ಆರ್ ಗಂಗಾಧರಪ್ಪ

ತಂದೆ ಹೆಸರು : ರಾಮಪ್ಪ

ವಯಸ್ಸು : 47 ವರ್ಷ

ಉದ್ಯೋಗ : ವ್ಯವಸಾಯ

ವಾಸಸ್ಥಳ : ಮಾಳೇನಹಳ್ಳಿ ಗ್ರಾಮ

**ದಿನಾಂಕ. 16-02-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :** ಶ್ರೀ ಕೆ ಆರ್ ಜಿ ವಕೀಲರಿಂದ

ಸಾಕ್ಷಿಯು ನಿಪಿ-1 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ನಾನು ನೋಂದಣಿ ಆದ ಪತ್ರಕ್ಕೆ ಸಹಿ ಹಾಕಿರುತ್ತೇನೆ. ನಿಪಿ-1 ಕ್ಕೂ ಕೂಡ ನಾನು ಸಹಿ ಹಾಕಿದ್ದು, ಆದರೆ ಅದರಲ್ಲಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ನಿಪಿ-1 ಕ್ಕೆ ನಟರಾಜು ಮತ್ತು ಅಶೋಕರವರು ಸಾಕ್ಷಿಯಾಗಿ ಸಹಿ ಹಾಕಿರುತ್ತಾರೆ. ನಾನು ನಿಪಿ-1 ರ ವಿಚಾರಗಳನ್ನು ತಿಳಿದುಕೊಂಡಿರುವುದಿಲ್ಲ. ಹಾಗೆ ಸಹಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು** ವಾದಿ ಪರ ವಕೀಲರು **ಅನುಮತಿ** ಕೋರಿದ್ದು, ಅನುಮತಿ **ನೀಡಲಾಯಿತು.)**

**ಪಾಟೀ ಸವಾಲುಃ** ವಾದಿ ಪರ ಶ್ರೀ ಕೆ ಆರ್ ಜಿ ವಕೀಲರಿಂದ

ನಾನು 10 ನೇ ತರಗತಿ ಓದಿರುತ್ತೇನೆ. ಯಾವುದೇ ಪತ್ರಗಳಿಗೂ ನಾನು ಓದದೇ ಸಹಿ ಮಾಡವುದಿಲ್ಲ ಎಂದರೆ ಸಾಕ್ಷಿಯು ಕುಮಾರಪ್ಪ ಹೇಳಿದ ಮೇರೆಗೆ ನಂಬಿಕೆಯಿಂದ ನೋಂದಣಿ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ-1 ರ ಮೇಲೆ ಸಹಿಯನ್ನು ಎಲ್ಲಿ ಮಾಡಿದ್ದೇನೆಂದು ನನಗೆ ಮರೆತು ಹೋಗಿದೆ. ಆ

ಸಮಯದಲ್ಲಿ ಬೇರೆ ಯಾರು ಇದ್ದರು ಎಂದು ಈಗ ಮರೆತುಹೋಗಿದೆ. ಆ ಸಮಯದಲ್ಲಿ ವಾದಿಯರು ಮತ್ತು ಪ್ರತಿವಾದಿ ಹಾಜರಿದ್ದರು ಎಂದರೆ ನಾನು ಸರಿಯಾಗಿ ನೋಡಿಲ್ಲ. ಎಲ್ಲಾ ವಿಷಯ ತಿಳಿದಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ನ್ನು ಬರೆದುಕೊಡುವ ದಿನ ವಾದಿಯರು, ಪ್ರತಿವಾದಿ, ನಾನು ಮತ್ತು ನಟರಾಜ ಹಾಜರಿದ್ದೇವು ಎಂದರೆ ಸಾಕ್ಷಿಯು ಅವಸರದಲ್ಲಿ ನಾನು ಸಹಿ ಮಾಡಿದ್ದು, ಯಾರ್ಯಾರು ಇದ್ದರು ಎಂದು ಸರಿಯಾಗಿ ಗಮನಿಸಿಲ್ಲ ಎಂದು ನುಡಿಯುತ್ತಾರೆ. ವಾದಿಯರು ಪ್ರತಿವಾದಿಯರ ಬಳಿ 36 ಸಾವಿರ ಸಾಲ ಪಡೆದು ಭದ್ರತೆಗಾಗಿ ನಿಪಿ-4 ನ್ನು ಬರೆದುಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದಂತೆ ನಾನು ಸಹಿ ಹಾಕಿರುತ್ತೇನೆಂದರೆ ಸಾಕ್ಷಿಯು ಶುದ್ದ ಕ್ರಯಕ್ಕೆ ಪಡೆದಿದ್ದೇನೆ ಎಂದು ಹೇಳಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಹಣವನ್ನು ಬಡ್ಡಿ ಸಮೇತ ವಾಪಸ್ಸು ನೀಡಿದಾಗ ಕ್ರಯಪತ್ರವನ್ನು ವಾಪಸ್ಸು ಬರೆದುಕೊಡುತ್ತೇನೆ ಎನ್ನುವ ಬಗ್ಗೆ ಆದ ನಿಪಿ-1 ಕರಾರಿಗೆ ನಾನು ಸಹಿ ಹಾಕಿದ್ದೇನೆಂದರೆ ಸಾಕ್ಷಿಯು ಸಹಿ ಹಾಕಿದ್ದು ಆದರೆ ಅದರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ಎದುರು ಕರಾರು ಬರೆದುಕೊಟ್ಟಿರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ನನಗೆ ವಿಚಾರಗಳು ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ತಾಯಿ ಕಡೆಯಿಂದ ಸಂಬಂಧಿಕರಾಗಬೇಕು. ನಾನು ಪ್ರತಿವಾದಿಯ ಬಳಿ ಸುಮಾರು 12 ಲಕ್ಷ ಸಾಲ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಅವರಿಗೆ ಜಮೀನು ಮಾರಾಟ ಮಾಡಲು ಕರಾರು ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಬಳಿ ಸಾಲ ಪಡೆದಿದ್ದಕ್ಕಾಗಿ ಅವರ ಒತ್ತಡಕ್ಕೆ ಮಣಿದು ವಾದಿಯರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಿನಾಂಕಃ 28-06-2004 ರಂದು ಆದ ನಿಪಿ-1 ಮತ್ತು 4 ರಲ್ಲಿರುವ ವಿಚಾರಗಳು ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** <u>ಪ್ರತಿವಾದಿ ಶ್ರೀ ಕೆ ಎಲ್ ಆರ್</u> **<u>ವಕೀಲರಿಂದ.</u>**

ವಾದಿಯರು ಸಹ ತಾಯಿಯ ಕಡೆಯಿಂದ ನನಗೆ ಸಂಬಂಧಿಕರಾಗಬೇಕು ಎಂದರೆ ಸರಿ.

ಮರುವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**

**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಅಸಲು ದಾವಾ ನಂ.**

ಪಿ .ಡಬ್ಲ್ಯೂ:2

ಹೆಸರು : ಪರಮೇಶ್ವರಪ್ಪ

ತಂದೆ **ಹೆಸರು** : ಲಕ್ಷ್ಮಣಪ್ಪ

ವಯಸ್ಸು : 41 ವರ್ಷ

ಉದ್ಯೋಗ : ಭೂ ಮಾಪಕರು

ವಾಸಸ್ಥಳ : ತರೀಕೆರೆ

**ದಿನಾಂಕ. 16-02-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :** ಶ್ರೀ ಬಿ ಪಿ ಆರ್ ವಕೀಲರಿಂದ

ಸಾಕ್ಷಿಯು ವಾರೆಂಟ್ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-**1** ಎಂದು ವಾದಿ ಮತ್ತು ಪ್ರತಿವಾದಿ ಮೆಮೋ ಆಫ್ ಇನ್‌ಸ್ಟ್ರಕ್ಷನ್‌ನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಸಿ-**2** ಮತ್ತು **3** ಎಂದು, ಒಟ್ಟು ಹತ್ತು ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಸಿ-**4** ಎಂದು ಗುರುತಿಸಲಾಯ್ತು. ನೋಟೀಸಿನ ಎರಡು ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಸಿ-**5** ಮತ್ತು ನಿಸಿ-**6** ಎಂದು ಗುರುತಿಸಲಾಯ್ತು. ಹೇಳಿಕೆಯ ಎರಡು ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಸಿ-**7** ಮತ್ತು ನಿಪಿ-**8** ಎಂದು ಗುರುತಿಸಲಾಯಿತು. ನಕ್ಷೆಯ ಪ್ರತಿಯನ್ನು ನಿಸಿ-**9** ಎಂದು ಗುರುತಿಸಲಾಯ್ತು.

ಸೂಚನಾವಳಿಗಳಿಗೆ ನೀಡಿದ ಉತ್ತರಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಸಿ-10 ಮತ್ತು 11 ಎಂದು ಗುರುತಿಸಲಾಯ್ತು. ವರದಿಯನ್ನು ನಿಸಿ-12 ಎಂದು ಗುರುತಿಸಲಾಯ್ತು.

**ಪಾಟೀ ಸವಾಲುಃ** ಪ್ರತಿವಾದಿಗಳ ಶ್ರೀ **ವಕೀಲರಿಂದ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.

**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಅಸಲು ದಾವಾ ನಂ.364/2018**

ಡಿ .ಡಬ್ಲ್ಯೂಃ 2

ಹೆಸರು ಃ ಪಾರ್ವತಿ

ಗಂಡನ ಹೆಸರು ಃ ನಾಗರಾಜ್

ವಯಸ್ಸು ಃ 40 ವರ್ಷ

ಉದ್ಯೋಗ ಃ ಪಿ ಡಿ ಓ

ವಾಸಸ್ಥಳ ಃ ತರೀಕೆರೆ

**ದಿನಾಂಕ. 16-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ** ಪ್ರತಿವಾದಿ ಪರ ಶ್ರೀ ಬಿ ಎಸ್ ವಕೀಲರಿಂದ

ದಾವ ಸ್ವತ್ತನ್ನು ನಾನು ನೋಡಿರುತ್ತೇನೆ. ಅದು ಖಾಲಿ ನಿವೇಶನವಾಗಿರುತ್ತದೆ. ವಾದಿ ಮತ್ತು ಪ್ರತಿವಾದಿಯರು ಗೊತ್ತು. ದಾವ ಸ್ವತ್ತಿನ ವಿಸ್ತೀರ್ಣ ದಾಖಲೆಗಳಂತೆ 35 ಇಂಟು 40 ಇರುತ್ತದೆ. ದಾವ ಸ್ವತ್ತಿನ ಹಕ್ಕು ಪತ್ರವನ್ನು ವಾದಿಯರಿಗೆ ತಹಶೀಲ್ದಾರ್ ರವರು ದಿಃ 20-07-2017 ರಂದು ನೀಡಿರುತ್ತಾರೆ. ದಾವ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ ಸರ್ವೆ ನಂ. 52, ಉತ್ತರಕ್ಕೆಃ ಕಮಲಬಾಯಿ ಮನೆ, ದಕ್ಷಿಣಕ್ಕೆಃ ಚಂದ್ರುನಾಯ್ಕರವರ ಮನೆ ಇರುತ್ತದೆ. ನಾನು ದಾವ ಸ್ವತ್ತಿಗೆ ಅಳತೆ ಮಾಡಲು ಹೋದಾಗ ಖಾಲಿ ನಿವೇಶನವಿದ್ದು, ಪೂರ್ವ-ಪಶ್ಚಿಮಃ 34, ಉತ್ತರ-ದಕ್ಷಿಣಃ 14 ಅಳತೆ ಕಂಡುಬಂದಿರುತ್ತದೆ. ದಾವ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಸರ್ವೆ ನಂಬರ್ 52 ಎಂದು ನಮೂದಿಸಿದ್ದು, ಅದು 54 ಆಗಬೇಕಾಗುತ್ತದೆ. ಸ್ವತ್ತಿನ ಬಗ್ಗೆ ವಿವಾದ ಇರುವುದರಿಂನದ ಪಂಚಾಯಿತಿ ದಾಖಲೆಗಳಲ್ಲಿನ ಇನ್ನು ತಿದ್ದುಪಡಿ ಆಗಿರುವುದಿಲ್ಲ. ಆದರೆ ಹಕ್ಕುಪತ್ರದಲ್ಲಿ ತಿದ್ದುಪಡಿ ಮಾಡಿ ನೀಡಲಾಗಿದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಪ್ರತಿವಾದಿ ಪರ ವಕಿಲರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಬಿ ಎಸ್ ವಕೀಲರಿಂದ

ವಾದಿಯು ದಾವ ಸ್ವತ್ತಿನ ದಕ್ಷಿಣ ದಿಕ್ಕಿನಲ್ಲಿರುವ ಚಂದ್ರನಾಯ್ಕರ ಮನೆಯ ಶೆಡ್ಡಿನಲ್ಲಿ ವಾಸವಾಗಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರ ಜಾಗದಲ್ಲೇ ವಾಸವಾಗಿರುತ್ತಾರೆಂದು ನುಡಿಯುತ್ತಾರೆ. ದಾವ ಸ್ವತ್ತು ವಾದಿಯು ವಾಸವಾಗಿರುವ ಗುಡಿಸಲು ಸೇರಿ ಖಾಲಿ ನಿವೇಶನ ಇರುತ್ತದೆ. ವಾದಿಯು ವಾಸವಾಗಿರುವ ಶೆಡ್ಡು ಚಂದ್ರನಾಯ್ಕನಿಗೆ ಸೇರಿದ್ದು ಎಂದರೆ ಸರಿಯಲ್ಲ. ದಾವ ಸ್ವತ್ತು ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಹಿಂದೆ ಪ್ರತಿವಾದಿಗೆ ಸೇರಿದ ಮನೆ ದಾವ ಸ್ವತ್ತಿನಲ್ಲಿ ಇದ್ದು, ಅದು ಶೀಥಿಲಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವ ಸ್ವತ್ತಿನ ದಾಖಲೆಯಲ್ಲಿ ಪ್ರತಿವಾದಿಯ ಹೆಸರು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರದು ಜಾಗ ಇದೆ ಆದರೆ ಅದು ದಾವ ಸ್ವತ್ತು ಅಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ದಾವ ಸ್ವತ್ತಿಗೆ ಕಂದಾಯ ಕಟ್ಟುತ್ತಿದ್ದಾರೆಂದರೆ ಸರಿಯಲ್ಲ. ಸರ್ವೆಯರ್ ರವರು ದಾವ ಸ್ವತ್ತನ್ನು ಅಳತೆ ಮಾಡಿ ಅದು ಕೇವಲ 34 ಇಂಟು 14 ಇದ್ದು 35 ಇಂಟು 40 ಇರುವುದಿಲ್ಲ ಎಂದು ತಿಳಿಸಿರುತ್ತಾರೆಂದರೆ ಸರಿ. ಪ್ರತಿವಾದಿಯು ವಾದಿಯ ಮಂಜೂರಾತಿಯನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದಾರೆಂದರೆ ಸರಿ. ಅದರಲ್ಲಿ ನಾವು 2ನೇ ಪ್ರತಿವಾದಿ ಎಂದರೆ ಸರಿ. ಮೇಲ್ಮನವಿ ಸಲ್ಲಿಸಿದ ನಂತರ ಎ ಸಿ ರವರು ಸ್ವತ್ತಿನ ಅಳತೆ ಮಾಡಿ ವರದಿ ಸಲ್ಲಿಸಲು ಆದೇಶ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಅಳತೆ ಮಾಡಿ ಮಹಜರ್ ಮಾಡಿರುತ್ತೇವೆಂದರೆ ನನಗೆ ಮಾಹಿತಿ ಇಲ್ಲ. ವಾದಿಯ ಮಂಜೂರಾತಿಯನ್ನು ವಜಾಗೊಳಿಸಲು ಆರ್ ಐ ರವರು ಶಿಪಾರಸ್ಸು ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಗೆ ಸೇರಿದ ಜಾಗದಲ್ಲಿ ವಾದಿಯು ಸುಳ್ಳು ಮಾಹಿತಿ ನೀಡಿ ಮಂಜೂರು ಮಾಡಿಸಿಕೊಂಡಿದ್ದಾರೆಂದರೆ ಸರಿಯಲ್ಲ. ಸರ್ವೆಯರ್ ವರದಿ ಪ್ರಕಾರ ವಾದಿಗೆ ಮಂಜೂರಾದ ವಿಸ್ತೀರ್ಣದ ಜಾಗ ಇಲ್ಲ ಎಂದರೆ ಸರಿ. ವಾದಿಯು ಕಾನೂನುಬಾಹಿರವಾಗಿ ಸ್ವತ್ತನ್ನು ಮಂಜೂರು ಮಾಡಿಸಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವ ಸ್ವತ್ತು ಪ್ರತಿವಾದಿಗೆ ಸೇರಿದ ಸ್ವತ್ತಾಗಿದ್ದು, ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಮನೆ ಮಂಜೂರಾಗಿರುವ ವಿಚಾರ ನನಗೆ ಗೊತ್ತು. ಸ್ವತ್ತಿನ ತಕರಾರು ಇದ್ದ ಕಾರಣ ಮನೆಯ ಹಣ ಮಂಜೂರಾಗಿಲ್ಲ ಎಂದರೆ ಸರಿ. ವಾದಿಯರು ಸುಳ್ಳು ಚಕ್ಕುಬಂದಿ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವ ಸ್ವತ್ತಿನಲ್ಲಿ ಪ್ರತಿವಾದಿ ಮನೆಯ ತಳಪಾಯ ಹಾಕಿರುತ್ತಾರೆಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ** ವಾದಿ ಶ್ರೀ ಎಎ **ವಕೀಲರಿಂದ.**

ಹಕ್ಕುಪತ್ರದಂತೆ ವಾದಿಯ ಹೆಸರಿಗೆ ಪಂಚಾಯಿತಿಯಲ್ಲಿ ಖಾತೆ ಆಗಿದೆ ಎಂದರೆ ಸರಿ. ಸರ್ವೆ ನಂ. 54 ರಲ್ಲಿ ತಹಶೀಲ್ದಾರ್ ರವರು ವಿಂಗಡಣೆ ಮಡಿ ಸ್ವತ್ತನ್ನು ಮಂಜೂರಿ ಮಾಡಿರುತ್ತಾರೆಂದರೆ

ಸರಿ. 35 ಇಂಟು 40 ವಿಸ್ತೀರ್ಣದಂತೆ ಹಣ ಪಾವತಿ ಮಾಡಿ ಖಾತೆಯಾಗಿದೆ ಎಂದರೆ ಸರಿ. ಮಂಜೂರಾತಿ ಪತ್ರದಂತೆ ಖಾತೆಯಲ್ಲಿ ಚಕ್ಕುಬಂದಿ ತೋರಿಸಲಾಗಿದೆ ಎಂದರೆ ಸರಿ. ದಿಃ 20-10-2018 ರಲ್ಲಿ ಪ್ರತಿವಾದಿಯು ತಮ್ಮ ಸ್ವತ್ತನ್ನು ಅಳತೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ಅಸಸ್ ಮೆಂಟ್ ಸಂಖ್ಯೆ ಮತ್ತು ವಿಸ್ತೀರ್ಣ ನಮೂದಿಸಿರುವುದಿಲ್ಲ. ಪ್ರತಿವಾದಿಯ ಹೆಸರು, ಕ್ರಮ ಸಂಖ್ಯೆ 45 ರಲ್ಲಿ ಖಾತೆ ಇದ್ದು, ಅದರ ಅಳತೆ 70 ಇಂಟು 35 ಆಗಿರುತ್ತದೆ. ಸದರಿ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ ವೀರಭದ್ರಪ್ಪ, ಉತ್ತರಕ್ಕೆಃ ಮೇಗ್ಯನಾಯ್ಕ, ದಕ್ಷಿಣಕ್ಕೆಃ ಕೈ ಪಂಪು ಎಂದು ನಮೂದಾಗಿರುತ್ತದೆ. ಪ್ರತಿವಾದಿಯ ಖಾತೆಯಲ್ಲಿರುವ ಸ್ವತ್ತಿನ ಚಕ್ಕುಬಂದಿ ಮತ್ತು ದಾವ ಸ್ವತ್ತಿನ ಚಕ್ಕುಬಂದಿ ಬೇರೆ ಬೇರೆ ಎಂದರೆ ಸರಿ. ದಾವ ಆಸ್ತಿಯಿಂದ ಸದರಿ ಸ್ವತ್ತು ಪಕ್ಕದಲ್ಲೇ ಇದ್ದು ಆದರೆ ಎಷ್ಟು ದೂರ ಎಂದು ಹೇಳಲಾಗುವುದಿಲ್ಲ. ಪ್ರತಿವಾದಿಯ ಸ್ವತ್ತಿನ ಸುತ್ತಲೂ ಚಂದ್ರನಾಯ್ಕನ ಸ್ವತ್ತು ಇಲ್ಲ ಎಂದರೆ ಸರಿ. ಚಂದ್ರನಾಯ್ಕನ ಸ್ವತ್ತು ಕ್ರಮ ಸಂಖ್ಯೆ 42 ರಲ್ಲಿ ನಮೂದಾಗಿದೆ ಎಂದರೆ ಸರಿ. ಪ್ರತಿವಾದಿಯ ಸ್ವತ್ತಿನ ಇ ದಾಖಲೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಮಾನ್ಯವಾಗಿ ಇ ದಾಖಲೆ ನೀಡುವಾಗ ಸ್ವತ್ತಿನ ಮೂಲ ಪತ್ರ ಹಾಗೂ ಅಳತೆ ಮಾಡಿದ ನಂತರ ನೀಡಲಾಗುವುದು ಎಂದರೆ ಸರಿ. ಸಾಮಾನ್ಯವಾಗಿ ನಿವೇಶನವನ್ನು ಮಂಜೂರು ಮಾಡುವಾಗ ಅದನ್ನು ಪರಿಶೀಲಿಸುತ್ತಾರೆಂದರೆ ಸರಿ. ನಮಗೆ ಮೇಲಿನ ಅಧಿಕಾರಿಗಳಿಂದ ವಿಸ್ತೀರ್ಣ ತಿದ್ದುಪಡಿ ಮಾಡುವ ಬಗ್ಗೆ ಯಾವುದೇ ಆದೇಶ ಬಂದಿಲ್ಲ. ಈಗಲೂ ಸಹ ವಾದಿಯ ಹೆಸರಿಗೆ 35 ಇಂಟು 40 ವಿಸ್ತೀರ್ಣದ ಖಾತೆ ಇದೆ ಎಂದರೆ ಸರಿ. ರೆವಿನ್ಯೂ ಇನ್ಸ್‌ಪೆಕ್ಟರ್ ಸ್ಥಳ ಪರಿಶೀಲನೆ ಮಾಡುವಾಗ ನಾನು ಹಾಜರಿರಲಿಲ್ಲ ಹಾಗೂ ನನಗೆ ಮಾಹಿತಿ ಇರಲಿಲ್ಲ. ಸರ್ವೆಯರ್ ರವರು ಯಾವ ದಾಖಲೆ ಆಧಾರದ ಮೇಲೆ ಅಳತೆ ಮಾಡಿದರು ಎಂದು ನನಗೆ ಗೊತ್ತಿಲ್ಲ. ದಾವ ಸ್ವತ್ತಿನ ಅಕ್ಕಪಕ್ಕ ಪ್ರತಿವಾದಿ ವಾಸವಿರುವ ಬಗ್ಗೆ ನನಗೆ ಗೊತ್ತಿಲ್ಲ. ಕ್ರಮ ಸಂಖ್ಯೆ 45 ರಲ್ಲಿ ಯಾವ ಸ್ವತ್ತು ಇದೆ ಎಂದು ನಾನು ನೋಡಿಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**

**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಅಸಲು ದಾವಾ ನಂ.**

ಸಿ.ಡಬ್ಲ್ಯೂ:1

ಹೆಸರು : ಮಧುಸೂದನ

ತಂದೆ ಹೆಸರು : ತೇಜಪ್ಪ

ವಯಸ್ಸು : 26 ವರ್ಷ

ಉದ್ಯೋಗ : ಭೂ ಮಾಪಕರು

ವಾಸಸ್ಥಳ : ತರೀಕೆರೆ

**ದಿನಾಂಕ. 18-11-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :**

ದಿನಾಂಕ: 24-02-2020 ರಂದು ನಾನು ನ್ಯಾಯಾಲಯದ ಆದೇಶದಂತೆ ದಾವ ಸ್ವತ್ತಿನ ಅಳತೆ ಕಾರ್ಯ ಮಾಡಿರುತ್ತೇನೆ. ಅಳತೆ ಮಾಡುವ ಮೊದಲು ಉಭಯಪಕ್ಷಗಾರರಿಗೆ ನೋಟೀಸನ್ನು ನೊಂದಣಿ ಅಂಚೆ ಮೂಲಕ ನೀಡಿರುತ್ತೇನೆ. ವಾದಿಯು ನೋಟೀಸನ್ನು ಪಡೆದಿದ್ದು, ಪ್ರತಿವಾದಿಯರು ಪಡೆದಿರುವುದಿಲ್ಲ. ನಾನು ಸ್ಥಳಕ್ಕೆ ಅಳತೆ ಮಾಡಲು ಹೋದಾಗ ವಾದಿ ಮತ್ತು ಇನ್ನೊಬ್ಬರು ಇದ್ದರು. ಪ್ರತಿವಾದಿಯರು ಹಾಜರಿರಲಿಲ್ಲ. ನಾನು ಅಳತೆ ಮಾಡಿದಾಗ ಸರ್ವೆ ನಂ. 35/7 ರಲ್ಲಿ ತಿಮ್ಮಕ್ಕ ಎನ್ನುವವರು ಒಂದೂವರೆ ಗುಂಟೆ ಜಾಗವನ್ನು ಒತ್ತುವರಿ ಮಾಡಿರುವುದು ಕಂಡುಬಂದಿದ್ದು, ಮಮತ ಮತ್ತು ರಮ್ಯರವರು ಮೂರು ಗುಂಟೆ ಜಾಗವನ್ನು ಒತ್ತುವರಿ ಮಾಡಿರುವ ಬಗ್ಗೆ ಕಂಡುಬಂದಿರುತ್ತದೆ. ಆದರೆ ಸದರಿ ತಿಮ್ಮಕ್ಕ, ಮಮತ ಮತ್ತು ರಮ್ಯರವರ ಹೆಸರಿನಲ್ಲಿ ಪಹಣಿ ಇರುವುದಿಲ್ಲ, ಆದರೆ ಅವರ ತಂದೆ ನಾರಾಯಣಪ್ಪನ ಹೆಸರಿನಲ್ಲಿ ಸರ್ವೇ ನಂ. 35/1 ಮತ್ತು ಸರ್ವೆ ನಂ. 35/3 ಪಹಣಿ ಇರುವುದು ಕಂಡುಬಂದಿರುತ್ತದೆ. ನಾನು ಅಳತೆ ಕಾರ್ಯ ಮಾಡಿ ನಕ್ಷೆ ತಯಾರಿಸಿ, ಮಹಜರ್ ಮಾಡಿ, ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಮಹಜರ್ ಮಾಡಿದಾಗ ವಾದಿ, ದರ್ಶನ್ ಮತ್ತು ಇನ್ನೊಬ್ಬರು ಹಾಜರಿದ್ದರು.

ಸಾಕ್ಷಿಯು ವಾರೆಂಟ್ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-1 ಎಂದು ವಾದಿ ಮತ್ತು ಪ್ರತಿವಾದಿ ಮೆಮೋ ಆಫ್ ಇನ್‌ಸ್ಟ್ರಕ್ಷನ್‌ನ್ನು ನೋಡಿ ಗುರುತಿಸಿದ್ದು ಅವುಗಳನ್ನು

ಕ್ರಮವಾಗಿ ನಿಸಿ-2 ಮತ್ತು 3 ಎಂದು, ಒಟ್ಟು ಹತ್ತು ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಸಿ-4 ಎಂದು ಗುರುತಿಸಲಾಯ್ತು. ನೋಟೀಸಿನ ಎರಡು ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಸಿ-5 ಮತ್ತು ನಿಸಿ-6 ಎಂದು ಗುರುತಿಸಲಾಯ್ತು. ಹೇಳಿಕೆಯ ಎರಡು ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಸಿ-7 ಮತ್ತು ನಿಪಿ-8 ಎಂದು ಗುರುತಿಸಲಾಯಿತು. ನಕ್ಷೆಯ ಪ್ರತಿಯನ್ನು ನಿಸಿ-9 ಎಂದು ಗುರುತಿಸಲಾಯ್ತು. ಸೂಚನಾವಳಿಗಳಿಗೆ ನೀಡಿದ ಉತ್ತರಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಸಿ-10 ಮತ್ತು 11 ಎಂದು ಗುರುತಿಸಲಾಯ್ತು. ವರದಿಯನ್ನು ನಿಸಿ-12 ಎಂದು ಗುರುತಿಸಲಾಯ್ತು.

**ಪಾಟೀ ಸವಾಲುಃ** ಪ್ರತಿವಾದಿಗಳ ಶ್ರೀ ಹೆಚ್ ಎಸ್ ಎನ್ **ವಕೀಲರಿಂದ.**

ಸಾಮಾನ್ಯವಾಗಿ ಯಾವುದೇ ಸ್ವತ್ತಿನ ಅಳತೆ ಮಾಡುವಾಗ ಪಕ್ಷಗಾರರು ಮತ್ತು ಸುತ್ತಲಿನ ಜನರಿಗೆ ನೊಟೀಸು ನೀಡಬೇಕು ಎಂದರೆ ಸರಿ. ದಾವ ಸ್ವತ್ತಿನ ಅಕ್ಕಪಕ್ಕದವರಿಗೆ ನೋಟೀಸು ನೀಡಿರುವುದಿಲ್ಲ. ನಾನು ಪ್ರತಿವಾದಿಯರಿಗೆ ಅಂಚೆ ಮೂಲಕ ನೋಟೀಸನ್ನು ನೀಡಿದ್ದು, ಆದರೆ ಅವರು ತಿರಸ್ಕರಿಸಿರುತ್ತಾರೆ. ನನಗೆ ವಾಪಸ್ಸು ಬಂದ ಅಂಚೆ ಲಕೋಟೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಕ್ಷಿಯು ಮುಂದುವರಿದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ. 35 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ದಾಖಲೆ ನೋಡಿ ಹೇಳಬೇಕಾಗುತ್ತದೆ.

ಈ ಹಂತದಲ್ಲಿ ಸಾಕ್ಷಿಯು ಸ್ವತ್ತಿನ ಮೂಲ ದಾಖಲೆಗಳನ್ನು ಪರಿಶೀಲಿಸಿ ಸಾಕ್ಷಿ ಹೇಳಬೇಕಾಗುತ್ತದೆ ಎಂದು ನುಡಿದು ಸಮಯ ಕೇಳಿದ್ದರಿಂದ, ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ನೀಡಿ ಮುಂದೂಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**

**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಅಸಲು ದಾವಾ ನಂ.274/2017**

ಪಿ .ಡಬ್ಲ್ಯೂ:2

ಹೆಸರು : ನಟರಾಜ್

ತಂದೆ ಹೆಸರು : ಬಸವರಾಜಪ್ಪ

ವಯಸ್ಸು : 57 ವರ್ಷ

ಉದ್ಯೋಗ : ವ್ಯವಸಾಯ

ವಾಸಸ್ಥಳ : ಎಂ.ಹೊಸಹಳ್ಳಿ

**ದಿನಾಂಕ. 29-10-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :** ಶ್ರೀ ಕೆ ಆರ್ ಜಿ ವಕೀಲರಿಂದ

ವಾದಿ ಪ್ರತಿವಾದಿಗಳು ನನಗೆ ಗೊತ್ತು. ನಿಪಿ-1 ರ ಮೇಲೆ ನನ್ನ ಸಹಿ ಇರುತ್ತದೆ. ನಾನು ನನ್ನ ಸ್ವಂತ ಕೆಲಸಕ್ಕೆಂದು ತರೀಕೆರೆಯ ರೇವಣ್ಣನ ಕಛೇರಿಗೆ ಹೋದಾಗ ವಾದಿ ಪ್ರತಿವಾದಿಗಳು ಇದ್ದರು. ನನಗೆ ಸಾಕ್ಷಿಯಾಗಿ ಸಹಿ ಮಾಡಲು ಪ್ರತಿವಾದಿ ತಿಳಿಸಿದ್ದು, ಅದರಂತೆ ನಾನು ನಿಪಿ-1 ಕ್ಕೆ ಸಹಿ ಮಾಡಿರುತ್ತೇನೆ. ಪ್ರತಿವಾದಿಯು ಜಮೀನನ್ನು 2 ನೇ ಪ್ರತಿವಾದಿಯ ಬಳಿ ಖರೀದಿಸಿರುತ್ತೇನೆಂದು ತಿಳಿಸಿರುತ್ತಾರೆ. ಸಾಕ್ಷಿಯು ನಿಪಿ-1 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ಅದರಲ್ಲಿ ಸಹಿಗಳು ಇಂಗ್ಲಿಷ್ ಭಾಷೆಯಲ್ಲಿದ್ದು ನನಗೆ ಗೊತ್ತಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿರುವ ವಿಚಾರಗಳನ್ನು ನಾನು ಓದಿರುವುದಿಲ್ಲ. ಪ್ರತಿವಾದಿ ಹೇಳಿದಂತೆ ನಾನು ಸಹಿ ಹಾಕಿರುತ್ತೇನೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ವಾದಿ ಪರ ಶ್ರೀ ಕೆ ಆರ್ ಜಿ **ರವರಿಂದ.**

ನಾನು **4** ನೇ ತರಗತಿ ಓದಿದ್ದು, ಕನ್ನಡವನ್ನು ಓದುತ್ತೇನೆ. ನಾನು ಸಹಿ ಮಾಡುವ ಮುಂಚೆ ದಾಖಲೆಯನ್ನು ಓದುತ್ತೇನೆ. ಅವಸರದಲ್ಲಿದ್ದರೆ ಓದುವುದಿಲ್ಲ. ನಾನು ವಾದಿ ಮತ್ತು ಪ್ರತಿವಾದಿಗಳ ಮೇಲೆ ವಿಶ್ವಾಸ ಇದ್ದುದ್ದರಿಂದ ನಿಪಿ-**1** ಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿ. ನಿಪಿ-**1** ನ್ನು ನಾನು ಸಂಪೂರ್ಣವಾಗಿ ಓದಿರುತ್ತೇನೆಂದರೆ ಸರಿಯಲ್ಲ. ನಿಪಿ-**1** ರಂತೆ ಎದುರು ಕರಾರನ್ನು ಪ್ರತಿವಾದಿ ಬರೆದುಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ. ವಾದಿಯರು ಬರೆದುಕೊಟ್ಟ ಕ್ರಯ ಪತ್ರಕ್ಕೆ ಪ್ರತಿವಾದಿಯು ನಿಪಿ-**1** ರಂತೆ ಎದುರು ಕರಾರು ಪತ್ರವನ್ನು ಬರೆದುಕೊಟ್ಟಿರುವ ವಿಚಾರ ನನಗೆ ತಿಳಿದಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಯರು ಕ್ರಯಪತ್ರವನ್ನು ಬರೆದುಕೊಟ್ಟಿರುವ ಸಂಗತಿಯನ್ನು ನಿಪಿ-**1** ರಲ್ಲಿ ಬರೆಯಲಾಗಿದೆ ಎಂದರೆ ಸಾಕ್ಷಿಯು ನಾನು ಓದಿಲ್ಲ ಎಂದು ನುಡಿಯುತ್ತಾರೆ. ನಾನು ಪತ್ರಕ್ಕೆ ಸಹಿ ಮಾಡುವಾಗ ದಾವ ಸ್ವತ್ತನ್ನು ಕ್ರಯಕ್ಕೆ ನೀಡಿರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ವಾದಿಯರು ಪಡೆದ **36** ಸಾವಿರ ಹಣಕ್ಕೆ ಬಡ್ಡಿ ಸೇರಿಸಿ **50** ಸಾವಿರ ಹಣವನ್ನು ಪ್ರತಿವಾದಿಗೆ ನೀಡಿದ ನಂತರ ಪ್ರತಿವಾದಿ ದಾವ ಸ್ವತ್ತಿನ ಕ್ರಯಪತ್ರವನ್ನು ಮಾಡಿಕೊಡುತ್ತೇನೆಂದು ತಿಳಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಕ್ರಯಪತ್ರವನ್ನು ಕೇವಲ ಸಾಲದ ಭದ್ರತೆಗಾಗಿ ಬರೆದುಕೊಟ್ಟಿರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ವಾದಿಯರ ಖರ್ಚಿನೊಂದಿಗೆ ಕ್ರಯಪತ್ರ ಬರೆದುಕೊಡುತ್ತೇನೆ ಎನ್ನುವ ವಿಚಾರ ನನಗೆ ಗೊತ್ತು ಎಂದರೆ ಗೊತ್ತಿಲ್ಲ. ಪ್ರತಿವಾದಿ ನಿಪಿ-**1** ಕ್ಕೆ ಸಹಿ ಮಾಡಿರುವ ವಿಚಾರ ಗೊತ್ತು ಎಂದರೆ ಸರಿಯಲ್ಲ. ನಿಪಿ-**1** ಕ್ಕೆ ಗಂಗಾಧರಪ್ಪ ಮತ್ತು ಮಹಾಂತೇಶ ಸಾಕ್ಷಿಗಳಾಗಿ ಸಹಿ ಮಾಡಿರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಪ್ರತಿವಾದಿಯ ತಾಯಿ ಮತ್ತು ನನ್ನ ತಂದೆ ಅಣ್ಣ ತಂಗಿ ಎಂದರೆ ಸರಿ. ಪ್ರತಿವಾದಿ ನನ್ನ ಸಹೋದರ ಅಳಿಯ ಎಂದರೆ ಸರಿ. ಪ್ರತಿವಾದಿ ನನಗೆ ಸಹೋದರ ಅಳಿಯ ಆಗಿದ್ದಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಪ್ರತಿವಾದಿಗಳ ಶ್ರೀ ಕೆ ಎಲ್ ಆರ್ **ವಕೀಲರಿಂದ.**

ವಾದಿಯರು ಸಹ ನನಗೆ ಸಂಬಂಧಿಕರು ಎಂದರೆ ಸರಿ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.

**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಅಸಲು ದಾವಾ ನಂ.**

ಸಿ.ಡಬ್ಲ್ಯೂ:1

ಹೆಸರು : ಮಧುಸೂದನ

ತಂದೆ ಹೆಸರು : ತೇಜಪ್ಪ

ವಯಸ್ಸು : 26 ವರ್ಷ

ಉದ್ಯೋಗ : ಭೂ ಮಾಪಕರು

ವಾಸಸ್ಥಳ : ತರೀಕೆರೆ

**ದಿನಾಂಕ. 29-10-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :**

ದಿನಾಂಕ: 24-02-2020 ರಂದು ನಾನು ನ್ಯಾಯಾಲಯದ ಆದೇಶದಂತೆ ದಾವ ಸ್ವತ್ತಿನ ಅಳತೆ ಕಾರ್ಯ ಮಾಡಿರುತ್ತೇನೆ. ಅಳತೆ ಮಾಡುವ ಮೊದಲು ಉಭಯಪಕ್ಷಗಾರರಿಗೆ ನೋಟೀಸನ್ನು ನೊಂದಣಿ ಅಂಚೆ ಮೂಲಕ ನೀಡಿರುತ್ತೇನೆ. ವಾದಿಯು ನೋಟೀಸನ್ನು ಪಡೆದಿದ್ದು, ಪ್ರತಿವಾದಿಯರು ಪಡೆದಿರುವುದಿಲ್ಲ. ನಾನು ಸ್ಥಳಕ್ಕೆ ಅಳತೆ ಮಾಡಲು ಹೋದಾಗ ವಾದಿ ಮತ್ತು ಇನ್ನೊಬ್ಬರು ಇದ್ದರು. ಪ್ರತಿವಾದಿಯರು ಹಾಜರಿರಲಿಲ್ಲ. ನಾನು ಅಳತೆ ಮಾಡಿದಾಗ ಸರ್ವೆ ನಂ. 35/7 ರಲ್ಲಿ ತಿಮ್ಮಕ್ಕ ಎನ್ನುವವರು ಒಂದೂವರೆ ಗುಂಟೆ ಜಾಗವನ್ನು ಒತ್ತುವರಿ ಮಾಡಿರುವುದು ಕಂಡುಬಂದಿದ್ದು, ಮಮತ ಮತ್ತು ರಮ್ಯರವರು ಮೂರು ಗುಂಟೆ ಜಾಗವನ್ನು ಒತ್ತುವರಿ ಮಾಡಿರುವ ಬಗ್ಗೆ ಕಂಡುಬಂದಿರುತ್ತದೆ. ಆದರೆ ಸದರಿ ತಿಮ್ಮಕ್ಕ, ಮಮತ ಮತ್ತು ರಮ್ಯರವರ ಹೆಸರಿನಲ್ಲಿ ಪಹಣಿ ಇರುವುದಿಲ್ಲ, ಆದರೆ ಅವರ ತಂದೆ ನಾರಾಯಣಪ್ಪನ ಹೆಸರಿನಲ್ಲಿ ಸರ್ವೇ ನಂ. 35/1 ಮತ್ತು ಸರ್ವೆ ನಂ. 35/3 ಪಹಣಿ ಇರುವುದು ಕಂಡುಬಂದಿರುತ್ತದೆ. ನಾನು ಅಳತೆ ಕಾರ್ಯ ಮಾಡಿ ನಕ್ಷೆ ತಯಾರಿಸಿ, ಮಹಜರ್ ಮಾಡಿ, ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಮಹಜರ್ ಮಾಡಿದಾಗ ವಾದಿ, ದರ್ಶನ್ ಮತ್ತು ಇನ್ನೊಬ್ಬರು ಹಾಜರಿದ್ದರು.

ಸಾಕ್ಷಿಯು ವಾರೆಂಟ್ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-1 ಎಂದು ವಾದಿ ಮತ್ತು ಪ್ರತಿವಾದಿ ಮೆಮೋ ಆಫ್ ಇನ್‌ಸ್ಟ್ರಕ್ಷನನ್ನು ನೋಡಿ ಗುರುತಿಸಿದ್ದು ಅವುಗಳನ್ನು

ಕ್ರಮವಾಗಿ ನಿಸಿ-2 ಮತ್ತು 3 ಎಂದು, ಒಟ್ಟು ಹತ್ತು ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಸಿ-4 ಎಂದು ಗುರುತಿಸಲಾಯ್ತು. ನೋಟೀಸಿನ ಎರಡು ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಸಿ-5 ಮತ್ತು ನಿಸಿ-6 ಎಂದು ಗುರುತಿಸಲಾಯ್ತು. ಹೇಳಿಕೆಯ ಎರಡು ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಸಿ-7 ಮತ್ತು ನಿಪಿ-8 ಎಂದು ಗುರುತಿಸಲಾಯಿತು. ನಕ್ಷೆಯ ಪ್ರತಿಯನ್ನು ನಿಸಿ-9 ಎಂದು ಗುರುತಿಸಲಾಯ್ತು. ಸೂಚನಾವಳಿಗಳಿಗೆ ನೀಡಿದ ಉತ್ತರಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಸಿ-10 ಮತ್ತು 11 ಎಂದು ಗುರುತಿಸಲಾಯ್ತು. ವರದಿಯನ್ನು ನಿಸಿ-12 ಎಂದು ಗುರುತಿಸಲಾಯ್ತು.

**ಪಾಟೀ ಸವಾಲುಃ** ಪ್ರತಿವಾದಿಗಳ ಶ್ರೀ ಹೆಚ್ ಎಸ್ ಎನ್ **ವಕೀಲರಿಂದ.**

ಸಾಮಾನ್ಯವಾಗಿ ಯಾವುದೇ ಸ್ವತ್ತಿನ ಅಳತೆ ಮಾಡುವಾಗ ಪಕ್ಷಗಾರರು ಮತ್ತು ಸುತ್ತಲಿನ ಜನರಿಗೆ ನೊಟೀಸು ನೀಡಬೇಕು ಎಂದರೆ ಸರಿ. ದಾವ ಸ್ವತ್ತಿನ ಅಕ್ಕಪಕ್ಕದವರಿಗೆ ನೋಟೀಸು ನೀಡಿರುವುದಿಲ್ಲ. ನಾನು ಪ್ರತಿವಾದಿಯರಿಗೆ ಅಂಚೆ ಮೂಲಕ ನೋಟೀಸನ್ನು ನೀಡಿದ್ದು, ಆದರೆ ಅವರು ತಿರಸ್ಕರಿಸಿರುತ್ತಾರೆ. ನನಗೆ ವಾಪಸ್ಸು ಬಂದ ಅಂಚೆ ಲಕೋಟೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಕ್ಷಿಯು ಮುಂದುವರಿದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ. 35 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ದಾಖಲೆ ನೋಡಿ ಹೇಳಬೇಕಾಗುತ್ತದೆ.

ಈ ಹಂತದಲ್ಲಿ ಸಾಕ್ಷಿಯು ಸ್ವತ್ತಿನ ಮೂಲ ದಾಖಲೆಗಳನ್ನು ಪರಿಶೀಲಿಸಿ ಸಾಕ್ಷಿ ಹೇಳಬೇಕಾಗುತ್ತದೆ ಎಂದು ನುಡಿದು ಸಮಯ ಕೇಳಿದ್ದರಿಂದ, ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ನೀಡಿ ಮುಂದೂಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.